<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ</u>

<u>ಸಿ.ಸಿ.ನಂ.29/2024</u>

| | | | |
|---|---|---|---|
| ಹೆಸರು | : | ದೇವಿಕಾ ದೇವಿ ಎನ್ | ಸಿ .ಡಬ್ಲ್ಯೂ :17 |
| ಗಂಡನ ಹೆಸರು | : | ಮಂಜುನಾಥ | ಪಿ .ಡಬ್ಲ್ಯೂ :4 |
| ವಯಸ್ಸು | : | 43 ವರ್ಷ | |
| ಉದ್ಯೋಗ | : | PSI ಮಾದನಾಯಕನಹಳ್ಳಿ , ಪೊಲೀಸ್ ಠಾಣೆ | |
| ವಾಸಸ್ಥಳ | : | Bangalore. | |

ಸಾಕ್ಷಿಯನ್ನು ದಿಃ03-01-2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>

ಅಕ್ಟೋಬರ್ 2023 ರಿಂದ 15-02-2024 ರವರೆಗೆ ಗುಬ್ಬಿ ಪೊಲೀಸ್ ಠಾಣೆಯಲ್ಲಿ PSI ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 03-02-2024 ರಂದು ಈ ಕೇಸಿನ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ 16 ರಿಂದ ಸ್ವೀಕರಿಸಿ ತನಿಖೆ ಮುಂದುವರೆಸಿರುತ್ತೇನೆ .

ದಿಃ 03-02-2024 ರಂದು ಬೆಳಗ್ಗೆ 10.40 ರ ಸಮಯಕ್ಕೆ ಗಾಯಾಳು ಗಂಗಾಧರಯ್ಯ ರವರು ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ ಎಂದು ತುಮಕೂರು ಜಿಲ್ಲಾ ಆಸ್ಪತ್ರೆಯಿಂದ ಮಾಹಿತಿ ಬಂದಿದ್ದು ಸದರಿ ವಿಚಾರವನ್ನು CPI ರವರಿಗೆ ದೂರವಾಣಿಯ ಮೂಲಕ ತಿಳಿಸಿದ್ದು ಅವರು ತಾನು ಅನ್ಯ ಕರ್ತವ್ಯದಲ್ಲಿದ್ದು ನೀವೇ ಶವ ತನಿಖೆ ಮಾಡಿ ಕಡತವನ್ನು ವರ್ಗಾವಣೆ ಮಾಡಿ ಎಂದು ತಿಳಿಸಿದ ಮೇರೆಗೆ ಮಾನ್ಯ ನ್ಯಾಯಾಲಯಕ್ಕೆ IPC ಕಲಂ 337 ನ್ನು ಕೈ ಬಿಟ್ಟು ಕಲಂ 304 (ಎ) ಅಳವಡಿಸಿಕೊಳ್ಳಲು ಅನುಮತಿ ಕೋರಿ ಮನವಿ ಪತ್ರ ಸಲ್ಲಿಸಿದ್ದೇನೆ .

ಅದೇ ದಿನ ಮಧ್ಯಾಹ್ನ 2.00 ರಿಂದ 4.00 ಗಂಟೆಯವರೆಗೆ ಚಾಸಾ -6 ರಿಂದ 8 ರವರ ಸಮಕ್ಷಮ ತುಮಕೂರು ಜಿಲ್ಲಾ ಆಸ್ಪತ್ರೆಯಲ್ಲಿ ಮೃತ ಗಂಗಾಧರಯ್ಯ ರವರ ಶವ ತನಿಖೆಯನ್ನು ಮಾಡಿರುತ್ತೇನೆ .

ಅದೇ ಸಮಯ ಚಾಸಾ -9 ರಿಂದ 11 ರವರ ಹೇಳಿಕೆ ಪಡೆದಿದ್ದೇನೆ .

ಶವವನ್ನು ಚಾಸಾ -1 ರವರಿಗೆ ಹಸ್ತಾಂತರಿಸಿ ಸ್ವೀಕೃತಿ ಪಡೆದಿದ್ದೇನೆ .

ಈ ಪ್ರಕರಣವು ಘೋರ ಆರೋಪದ ಪ್ರಕರಣವಾಗಿದ್ದರಿಂದ ಪ್ರಕರಣದ ಕಡತವನ್ನು ಚಾಸಾ -18 ರವರಿಗೆ ವರ್ಗಾಯಿಸಿದ್ದೇನೆ .

ನಿಪಿ -5 ಶವ ತನಿಖಾ ವರದಿ ಎಂದು ಸಾಕ್ಷಿಯು ಗುರುತಿಸಿದ್ದಾರೆ .

ಪಾಟೀಸವಾಲು: ಆರೋಪಿ ಪರ ವಕೀಲರಿಂದಃ- ಇಲ್ಲ ಎಂದು ತಿಳಿಸಿದ್ದಾರೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
**(ಅನುಪಮ.ಡಿ )**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.